**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 393/2022**

| | | |
|---|---|---|
| ಸಾಕ್ಷಿಯ ಹೆಸರು | : ನಿಖಿಲ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಮಲ್ಲಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : 24 ವರ್ಷ | |
| ಉದ್ಯೋಗ | : ವ್ಯವಸಾಯ | |
| ವಾಸ ಸ್ಥಳ | : ಬೆಟ್ಟದಹಳ್ಳಿ | |

**ದಿನಾಂಕ: 02-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-**

ನನಗೆ ಚಾಸಾ-2 ರಿಂದ 8 ರವರ ಪರಿಚಯ ಇದೆ. ಮೃತ ಮಲ್ಲಪ್ಪ ರವರು ನನ್ನ ತಂದೆ ಇರುತ್ತಾರೆ. ಅವರು ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾರೆ. ನಾನು ಅಪಘಾತವನ್ನು ಪ್ರತ್ಯೇಕ್ಷವಾಗಿ ನೋಡಿಲ್ಲ, ಚಾಸಾ-2 ನನ್ನ ಅಣ್ಣನ ಮೂಲಕ ತಿಳಿದುಕೊಂಡಿದ್ದೇನೆ. ಸದರಿ ಅಪಘಾತವು ದಿನಾಂಕ 19-09-2021 ರಂದು ನನ್ನ ತಂದೆ ಸುಮಾರು ಸಂಜೆ 4.30 ಗಂಟೆಗೆ ಸಂತೆದಿಬ್ಬ ತೋಟದಿಂದ ನಮ್ಮ ಮನೆಗೆ ಬರಬೇಕಾದರೆ ಸಂತೆದಿಬ್ಬದ ಬಳಿ ಅಪಘಾತ ಆಗಿರುತ್ತದೆ. ಅಜ್ಜಂಪುರದ ಕಡೆಯಿಂದ ತರೀಕೆರೆಯ ಕಡೆಗೆ ಬರುತ್ತಿದ್ದ ಅಂಬ್ಯೂಲೈನ್ಸ್ ನಿಂದ ಅಪಘಾತ ಆಗಿರುತ್ತದೆ. ಗಾಯಗೊಂಡಿದ್ದ ನನ್ನ ತಂದೆಯನ್ನು ನಾನು ಅಪಘಾತದ ಸ್ಥಳದಲ್ಲಿಯೇ ನೋಡಿದ್ದೇನೆ. ನನ್ನ ಅಣ್ಣ ಅಂದರೆ ಚಾಸಾ-2 ಆರೋಪಿಯನ್ನು ತೋರಿಸಿ ಇವರೇ ಅಂಬ್ಯೂಲೈನ್ಸ್ ಚಾಲಕ ಇರುತ್ತಾರೆ ಎಂದು ತಿಳಿಸಿರುತ್ತಾರೆ. ನನ್ನ ಅಣ್ಣನು ಆರೋಪಿ ತನ್ನ ವಾಹನವನ್ನು ವೇಗದಿಂದ ನಡೆಸಿಕೊಂಡು ಬಂದಿದ್ದಾನೆ ಎಂದು ತಿಳಿಸಿದನು. ನಾನು ಸ್ಥಳಕ್ಕೆ ಹೋದಾಗ ವಾಹನ ಇರಲಿಲ್ಲ. ನಮ್ಮ ತಂದೆಯನ್ನು ನಮ್ಮದೇ ಓಮಿನಿ ಕಾರಿನಲ್ಲಿ ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿಯ ವೈದ್ಯರ ಸಲಹೆಯ ಮೇರೆಗೆ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಹೋಗಿದೇವೆ. ಅಲ್ಲಿ 22-23 ದಿವಸ ಚಿಕಿತ್ಸೆ ಕೊಡಿಸಿದ ನಂತರ ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ. ಅಲ್ಲಿ ಸುಮಾರು 51 ದಿನಗಳ ಕಾಲ ಚಿಕಿತ್ಸೆ ಕೊಡಿಸಿದ ನಂತರ ಫಲಕಾರಿ ಆಗದೇ ಅವರು ಮರಣ ಹೊಂದಿರುತ್ತಾರೆ. ಅಪಘಾತದ ಕುರಿತು ಪಿರ್ಯಾದಿಯನ್ನು ಎರಡು ದಿನ ತಡವಾಗಿ ನಾನೇ ನೀಡಿರುತ್ತೇನೆ. ನನ್ನ ತಂದೆಯ ಚಿಕಿತ್ಸೆಗೆ ಹೋಗಿದ್ದ ಕಾರಣ ಎರಡು ದಿನ ತಡ ಆಗಿರುತ್ತದೆ. ಪಿರ್ಯಾದಿಯನ್ನು ನಿಪಿ.1, ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

ನನ್ನ ತಂದೆಯ ಬೈಕ್ ನಂಬರ ಕೆಎ-14 ಯು-5121 ಇರುತ್ತದೆ. ದಿನಾಂಕ 22-09-2021 ರಂದು ಸದರಿ ವಾಹನವನ್ನು ಪೊಲೀಸರು ನನ್ನ ಮತ್ತು ಚಾಸಾ-4 ಮತ್ತು 6 ರವರ ಸಮಕ್ಷಮ ಜಪ್ತಿ

ಮಾಡಿಕೊಂಡಿದ್ದಾರೆ. ಜಪ್ತಿ ಪಂಚನಾಮೆಯನ್ನು ನಿಪಿ.2, ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರವ ಫೋಟೊದಲ್ಲಿ ನಮ್ಮ ವಾಹನ ಇರುತ್ತದೆ. ಸದರಿ ಫೋಟೊವನ್ನು ನಿಪಿ.3 ಎಂದು ಗುರುತಿಸಲಾಯಿತು. ಅಂಬ್ಯೂಲೈನ್ಸ್ ನಂಬರ ನನಗೆ ಗೊತ್ತಿಲ್ಲ. ಅದು ಹೊಸದುರ್ಗದ ಸರ್ಕಾರಿ ಆಸ್ಪತ್ರೆಗೆ ಸೇರಿದ ಬಗ್ಗೆ ಮಾಹಿತಿ ಗೊತ್ತಾಯಿತು. ಈಗ ತೋರಿಸುತ್ತಿರವ ಫೋಟೊದಲ್ಲಿ ಅಂಬ್ಯೂಲೈನ್ಸ್ ಇದೆ, ಸದರಿ ಫೋಟೊವನ್ನು ನಿಪಿ.4 ಎಂದು ಗುರುತಿಸಲಾಯಿತು. ಅಂಬ್ಯೂಲೈನ್ಸ್ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ. ಇಂಡೆಮ್ನಿಟಿ ಬಾಂಡ್‌ನ್ನು ನಿಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ದಿನಾಂಕ 19-09-2021 ರಂದು ಅಪಘಾತ ಆಗಿದೆ ಎನ್ನಲಾಗುವ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆ. ಅಪಘಾತ ಸ್ಥಳದಿಂದ ನಮ್ಮ ಮನೆ 3 ರಿಂದ 4 ಕಿ.ಮೀ ದೂರದಲ್ಲಿ ಇದೆ. ಸ್ಥಳಕ್ಕೆ ನಾನು ಒಬ್ಬನೇ ಹೋಗಿರುತ್ತೇನೆ. ಮಾಹಿತಿ ಗೊತ್ತಾದ 5 ನಿಮಿಷಕ್ಕೆ ನಾನು ನಮ್ಮ ಇನ್ನೊಂದು ಬೈಕ್‌ನ ಮೇಲೆ ಸ್ಥಳಕ್ಕೆ ಹೋಗಿರುತ್ತೇನೆ. ಸಂತೆದಿಬ್ಬದ ಬಳಿ ಅಪಘಾತ ಆಗಿತ್ತು. ಈಗ ತೋರಿಸುತ್ತಿರುವ ಪೋಟೊದ ಬಿಳಿ ಬಣ್ಣದ ಬೋರ್ಡ್ ಬಳಿ ನನ್ನ ತಂದ ಬಿದ್ದಿದ್ದರು. ಸದರಿ ರಸ್ತೆ ತರೀಕೆರೆಯಿಂದ ಅಜ್ಜಂಪುರದ ಕಡೆಗೆ ಹೋಗುತ್ತಿತ್ತು. ಸದರಿ ಫೋಟೊವನ್ನು ನಿಡಿ.1 ಎಂದು ಗುರುತಿಸಲಾಯಿತು. ನನ್ನ ತಂದೆ ಸಂತೆ ದಿಬ್ಬದ ಕಡೆಯಿಂದ ಅಜ್ಜಂಪುರದ ಕಡೆಗೆ ಹೋಗುತ್ತಿದ್ದರು ಎಂದು ನನ್ನ ಸಹೋದರ ನನಗೆ ತಿಳಿಸಿದ್ದಾನೆ. ನಾನು ಹೋದಾಗ ನನ್ನ ತಂದೆ ಸ್ಥಳದಲ್ಲಿಯೇ ಬಿದ್ದಿದ್ದರು. ಅಪಘಾತ ಸ್ಥಳದಲ್ಲಿ ಯಾವಾಗಲೂ ಜನ ಸಂದಣಿ ಇರುತ್ತದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ಠಾರು ರಸ್ತೆ ಸುಮಾರು 30 ಅಡಿ ಇದೆ ಎಂದರೆ ಸರಿಯಲ್ಲ, 25 ಅಡಿ ಇರಬಹುದು. ರಸ್ತೆಯ ಪಕ್ಕ ಸುಮಾರು 3 ಗಳಷ್ಟು ಮಣ್ಣಿನ ರಸ್ತೆ ಕೂಡಾ ಇದೆ ಎಂದರೆ ಸರಿ. ಅಜ್ಜಂಪುರದಿಂದ ಬರಬೇಕಾದರೆ ರಸ್ತೆ ಏರು ಮುಖವಾಗಿದೆ ಎಂದರೆ ಸರಿ ಮತ್ತು ತಿರುವುಗಳು ಇವೆ ಎಂದರೆ ಸರಿ. ಆ ಕಾರಣಕ್ಕೆ ಎಲ್ಲಾ ವಾಹನಗಳು ನಿಧಾನವಾಗಿ ಸಾಗುತ್ತವೆ ಎಂದರೆ ಸರಿಯಲ್ಲ. ಹೈವೆ ಇರುವುದರಿಂದ ಸಾಮಾನ್ಯವಾಗಿ ವಾಹನ ಸಂಚಾರ ಇರುತ್ತದೆ ಎಂದರೆ ಇರಬಹುದು. ನನ್ನ ತಂದೆ ಅಜ್ಜಂಪುರದ ಕಡೆಗೆ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರು. ನನ್ನ ತಂದೆಯನ್ನು ಜನರು ರಸ್ತೆಯ ಪಕ್ಕದಲ್ಲಿ ಕುರಿಸಿದ್ದರು. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ, ಆ ಕಾರಣಕ್ಕೆ ನನಗೆ ಅಂಬ್ಯೂಲೈನ್ಸ್ ಯಾವ ವೇಗದಲ್ಲಿ ಮತ್ತು ಹೇಗೆ ಬಂತು ಎಂದು ವೈಯಕ್ತಿ ಮಾಹಿತಿ ಇಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ತಂದೆ ಯಾವ ರೀತಿ ಮತ್ತು ಯಾವ ಪಕ್ಕದಲ್ಲಿ ಹೋಗುತ್ತಿದ್ದರು ಎಂದು ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಕೇವಲ ನಮ್ಮ ಅಣ್ಣನ ಹೇಳಿಕೆಯ ಮೇರೆಗೆ ಸುಳ್ಳು ಪರ್ಯಾದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ

ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ವಾಹನಕ್ಕೆ ಯಾವುದೇ ರೀತಿ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ವಾಹನ ಸಂಪೂರ್ಣವಾಗಿ ಡ್ಯಾಮೇಜ್ ಆಗಿದೆ. ನಮ್ಮ ವಾಹನಕ್ಕೆ ಎದುರುಗಡೆಯಿಂದ ಅಂಬ್ಯುಲೈನ್ಸ್ ಡಿಕ್ಕಿಪಡಿಸಿದ್ದರೇ ನಮ್ಮ ವಾಹನದ ಮುಂಭಾಗ ಸಂಪೂರ್ಣ ಡ್ಯಾಮೇಜ್ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಬೈಕಿನ ಮುಂಭಾಗಕ್ಕೆ ಯಾವುದೇ ಡ್ಯಾಮೇಜ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ವಾಹನಕ್ಕೆ ವಿಮೆ ಇರದೇ ಇದ್ದ ಕಾರಣ ಎರಡು ದಿನ ತಡವಾಗಿ ನಿಪಿ.3 ರಲ್ಲಿ ಕಾಣಿಸುವ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ಜಪ್ತಿ ಪಂಚನಾಮೆಯ ಕಾಲದಲ್ಲಿ ನಾನು, ನನ್ನ ದೊಡ್ಡಪ್ಪ ಮಲ್ಲೇಶಪ್ಪ ಮತ್ತು ಅಣ್ಣ ಯೋಗಶ ಮತ್ತು ಇನ್ನೊಬ್ಬ ಮಲ್ಲಿಕಾರ್ಜುನಪ್ಪ ಇದ್ದರು. ಆರೋಪಿ ಯ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ, ಆಗಿದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ**
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**